**Code No. 10 X(D)**

**ವಾಣಿಜ್ಯ ಪರೀಕ್ಷೆಗಳು**

# ಕನ್ನಡ ಬೆರಳಚ್ಚು – ಪ್ರಥಮ ದರ್ಜೆ – ಪ್ರಥಮ ಪತ್ರಿಕೆ

ಜುಲೈ, 2015

ಸಮಯ : 15 ನಿಮಿಷಗಳು

ಅಂಕಗಳು : 100

***ಸೂಚನೆಗಳು :***
1) ಈ ಕೆಳಗೆ ಕೊಟ್ಟಿರುವ ವಿಷಯವನ್ನು 10 ರಿಂದ 75 ಸ್ಥಾನಗಳಿಗೆ ಅಂಚಿನ ತಡೆಗಳನ್ನು ಸ್ಥಿರಪಡಿಸಿಕೊಂಡು ಎರಡು ಸಾಲುಗಳ ತರಪಿನಲ್ಲಿ ಬೆರಳಚ್ಚು ಮಾಡಬೇಕು.
2) ಕಾಗದದ ಒಂದು ಭಾಗದಲ್ಲಿ ಮಾತ್ರ ಬೆರಳಚ್ಚು ಮಾಡಬೇಕು.
3) ತಪ್ಪಿಲ್ಲದೆ ಅಂದವಾಗಿ ಬೆರಳಚ್ಚು ಮಾಡಲು ವಿಶೇಷ ಗಮನ ಕೊಡಬೇಕು.

---

ಕರೆಯದೆ ಬರುವವರನು, ಬಂಗಾಲಿನಲ್ಲಿ ನಡೆಯುವವನನ್ನು ಎಂಬ ವಚನದಲ್ಲಿ, ಈ ವರ್ಗದವರಿಗೆ ಅದೆಂತಹಾ ಅವಮಾನ, ನಿರ್ಲಕ್ಷ್ಯ, ಉದಾಸೀನತೆ ಎದುರಾಗುತ್ತದೆ ಎಂಬ ನೀತಿಯನ್ನು ಅಡಗಿಸಿಟ್ಟಿದೆ. ನಮ್ಮದಿಂದು ಯಾಂತ್ರಿಕ ಜೀವನ. ಪ್ರತಿಯೊಂದಕ್ಕೂ ಟೈಮೇ ಇಲ್ಲ. ಪುರುಸೊತ್ತಿಲ್ಲ ಎಂಬುದು ನಮ್ಮ ಎಡಬಿಡದ ಮಂತ್ರವಾಗಿದೆ. ಇಂತಹಾ ಹಿನ್ನೆಲೆಯಲ್ಲಿ ನಮ್ಮ ಮನೆಗಳಿಗೆ ಅಕಾಲದಲ್ಲಿ, ಆಮಂತ್ರಣವಿಲ್ಲದೆ. ಅನಿರೀಕ್ಷಿತವಾಗಿ ಬಂಧು ಬಳಗ, ಮಿತ್ರರೊಬ್ಬರು ಆಗಮಿಸಿದಾಗ ನಮಗೆಷ್ಟು ಕಿರಿ ಕಿರಿ, ಮುಜುಗರ ಆಗುತ್ತದೆ ಎಂಬುದನ್ನು ವಿವರಿಸಬೇಕಿಲ್ಲ, ಏಕೆಂದರೆ, ಅದು ಎಲ್ಲರಿಗೂ ಒಂದಲ್ಲ ಒಂದು ದಿನ ಅನುಭವವಾಗಿಯೇ ಇರುತ್ತದೆ. ಆದ್ದರಿಂದ ನಮ್ಮ ಮನೆಗೆ ಅತಿಥಿಗಳು ಆಗಮಿಸುವ ಮುಂಚೆ, ತಾವು ಬರುತ್ತಿರುವ ವಿಷಯವನ್ನು ಅತಿಥೇಯನಿಗೆ ತಿಳಿಸಿ, ಅವರಿಗದು ಸೌಕರ್ಯವೆನಿಸಿ ಬನ್ನಿ ಎಂಬ ಸ್ವಾಗತ ಸಿಕ್ಕಿದಾಗ ಮಾತ್ರ ಆಗಮಿಸುವುದು ಅತಿಥಿ ಅಭ್ಯಾಗತರ ಆ ವರ್ತನೆ, ಸಭ್ಯತೆ ಎನಿಸಿಕೊಳ್ಳುತ್ತದೆ. ಇಂತಹಾ ಮುನ್ಸೂಚನೆ ಹಿಂದಿಗಂತಾ ಇಂದಿನ ದಿನಗಳಲ್ಲಂತೂ ಅನಿವಾರ್ಯವೆನಿಸಿದೆ. ಈ ಆಮಂತ್ರಣವಿಲ್ಲದೆ ಬರುವುದು, ಅಸಭ್ಯತೆ ಇತ್ಯಾದಿಗಳಿಗೂ ಪ್ರಸಕ್ತ ಶೀರ್ಷಿಕೆ, ಲೇಖನಕ್ಕೂ ಏನೂ ಸಂಬಂಧ ಎಂದಿರಾ ಹೌದು, ಸಂಬಂಧವಿದೆ. ಪ್ರಸಕ್ತ ಪುರಾಣ ಕಾಲದ ಪ್ರಕರಣದಲ್ಲೂ ಆಮಂತ್ರಣವಿಲ್ಲದೆ ಹಾಜರಾದ ಒಬ್ಬ ವ್ಯಕ್ತಿಗೆ ಆದ ಅವಮಾನದ ಸಂದೇಶವಿದೆ. ಆದರಿಂದ ಕಲಿಯಬಲ್ಲವರಿಗೊಂದು ನೀತಿ ಪಾಠವೂ ಇದೆ.

[ Turn over

ಅಂದು, ದಕ್ಷನು ಎಲ್ಲ ರೀತಿಗಳಿಂದಲೂ ಅರ್ಹ, ಯೋಗ್ಯ ಎಂದು ತಿಳಿದು, ಬ್ರಹ್ಮನು ಈತನನ್ನು ಪ್ರಜಾಪತಿಗಳ ನಾಯಕ ಎಂದು ನೇಮಿಸಿದನು. ಇಂತಹಾ ದೊಡ್ಡ ಅಧಿಕಾರ ವಹಿಸಿಕೊಂಡು ದಕ್ಷನು, ಎಲ್ಲ ಋಷಿ ಮುನಿಗಳನ್ನೂ ಆಮಂತ್ರಿಸಿ, ಯಜ್ಞ ಏರ್ಪಡಿಸಿದ್ದನು. ಅದರಲ್ಲಿ ಹವಿರ್ಭಾಗ ಪಡೆಯಬೇಕಾದವರೆಲ್ಲರನ್ನೂ ಸಗೌರವ ಆಧರಗಳಿಂದ ಆಹ್ವಾನಿಸಿದನು. ಪ್ರಜಾಪತಿಗಳ ನಾಯಕನು ನೀಡಿದ ಆಮಂತ್ರಣವನ್ನು ಪುರಸ್ಕರಿಸಿದ ಕಿನ್ನರು, ನಾಗರು, ಸಿದ್ಧ, ಗಂಧವ್ರ ದೇವತಾದಿಗಳೂ ತಮ್ಮ ತಮ್ಮ ವಾಹನಗಳಲ್ಲಿ ಬಲು ಸಂತೋಷದಿಂದ ಯಜ್ಞಕ್ಕೆ ಪಯಣಿಸಿದ್ದರೂ. ಹೀಗೆ, ತಂಡೋಪತಂಡವಾಗಿ ಪಯಣಿಸುತ್ತಿರುವವರನ್ನು ಕಂಡ ದಕ್ಷ ಪುತ್ರಿ ಸತಿ ದೇವಿಯು ಏಕಕಾಲದಲ್ಲಿ ಇಷ್ಟೂ ಜನರು ಪಯಣಿಸುತ್ತಿರುವುದು. ಎಲ್ಲಿಗೆ, ಏತಕ್ಕೆ ಎಂಬ ಕಾರಣವನ್ನು ತಿಳಿದ ಆಕೆಗೂ ತಂದೆಯ ಮನೆಯ ಆ ಬಹು ಅಪರೂಪದ ಅದ್ಧೂರಿ ಕಾರ್ಯಕ್ರಮದಲ್ಲಿ ಭಾಗಿಯಾಗಿ ಆನಂದಿಸಿ ಬರುವ ಉತ್ಕಟೇಚ್ಚೆಯಾಯಿತು.

ತನ್ನಿ ಇಚ್ಛೆಯನ್ನು ಪತಿಗೆ ತಿಳಿಸಿ, ಅತಿ ದೈನ್ಯಭಾವದಿಂದ ಆತನ ಕಡೆಗಿ ನೋಡಿ, ಪ್ರಯಾಣಕ್ಕೆ ಅನುಮತಿಯನ್ನು ಬೇಡಿದಳು. ಸತಿಯ ಕೋರಿಕೆಗೆ ಸಾತ್ವಿಕವಾಗಿ ಸಮ್ಮತಿಸಿದ. ಶಿವನು, ಸತಿಯನ್ನು ಕುರಿತು, ದೇವಿ ನಿನ್ನ ಕೋರಿಕಯೇನೋ ಸರಿಯಾದದ್ದೇ, ಸಹಜವೂ ಆದದ್ದೇ, ನೀನು ತೌರಿಗೆ ಹೋಗಿ ಬರುವುದು ನನಗೂ ಇಷ್ಟವೇ ಆದರೆ ಎಲ್ಲಾ ಋಷಿ ಮುನಿಗಳಿಗೂ ಆಹ್ವಾನ ನೀಡಿದರು.